# ನಿಮ್ಮೊಡನೆ

## ಸ್ತ್ರೀ ಯಜಮಾನಿಕೆಯ ಕುಟುಂಬ

**ರಾಜ್ಯದಲ್ಲಿ ಈಗ 19.65 ಲಕ್ಷ ಸ್ತ್ರೀ ಯಜಮಾನಿಕೆಯ ಕುಟುಂಬಗಳಿವೆ. ಪಿತೃಪ್ರಧಾನ ವ್ಯವಸ್ಥೆಯ ಬಿಗಿ ಹಿಡಿತದಿಂದ ಸಮಾಜ ಹೊರಬರುತ್ತಿರುವ ಬದಲಾವಣೆಗಳನ್ನು ಈ ಅಂಕಿ ಅಂಶಗಳು ಸಂಕೇತಿಸುತ್ತವೆಯೆ? ಹೌದು. ಒಂದರ್ಥದಲ್ಲಿ ಈ ಅಂಕಿ ಅಂಶಗಳು ಸಮಾಜದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಧ್ವನಿಸುತ್ತಿವೆ. ಆದರೆ ಈ ಬದಲಾವಣೆಗಳ ಹಿಂದಿರುವ ಒತ್ತಡಗಳು, ಸಾಮಾಜಿಕ ಸಮಸ್ಯೆಗಳ ಮತ್ತೊಂದು ಮುಖವನ್ನೂ ಅನಾವರಣಗೊಳಿಸುತ್ತಿವೆ.**

ಮಹಿಳೆ ಮನೆಯ ಮುಖ್ಯಸ್ಥಳಾಗಿರುವ ಕುಟುಂಬಗಳ ಪ್ರಮಾಣ ರಾಜ್ಯದಲ್ಲಿ ಹೆಚ್ಚಾಗಿದೆ. ಇತ್ತೀಚೆಗೆ ಬಿಡುಗಡೆಯಾಗಿರುವ 2011ರ ಜನಗಣತಿ ಅಂಕಿ ಅಂಶ ಹೊರಗೆಡಹಿರುವ ವಿಚಾರ ಇದು. ಶೇಕಡಾವಾರು ಪ್ರಮಾಣದಲ್ಲಿ ಹೇಳುವುದಾದರೆ, ರಾಜ್ಯದ ಶೇಕಡ 14.91ರಷ್ಟು ಕುಟುಂಬಗಳ ಮುಖ್ಯಸ್ಥೆ ಮಹಿಳೆಯಾಗಿದ್ದಾಳೆ. ಅಖಿಲ ಭಾರತ ಮಟ್ಟದಲ್ಲಿ ಇಂತಹ ಕುಟುಂಬಗಳ ಪ್ರಮಾಣ ಸರಾಸರಿ ಶೇಕಡ 10.9. ಎಂದರೆ ಮಹಿಳೆಯೇ ಮನೆ ಯಜಮಾನಿಯಾಗಿರುವ ಕುಟುಂಬಗಳು ರಾಷ್ಟ್ರೀಯ ಸರಾಸರಿ ಮಟ್ಟಕ್ಕಿಂತ ರಾಜ್ಯದಲ್ಲಿಯೇ ಹೆಚ್ಚು.

'ಮನೆ ನೋಡಿಕೊಳ್ಳುವ ಪ್ರಾಥಮಿಕ ಹೊಣೆಗಾರಿಕೆಯನ್ನು ಯಾರು ಹೊರುತ್ತಿದ್ದಾರೆ' ಎಂಬಂತಹ ಪ್ರಶ್ನೆಗಳಿಗೆ ಸಿಕ್ಕ ಉತ್ತರಗಳನ್ನು ಆಧರಿಸಿ 'ಮನೆ ಯಜಮಾನರು ಯಾರು' ಎಂಬ ಅಂಕಿ ಅಂಶಗಳನ್ನು ಸಂಗ್ರಹಿಸಲಾಗಿದೆ.

ರಾಜ್ಯದಲ್ಲಿ ಈಗ ಮಹಿಳೆಯೇ ಮನೆ ಯಜಮಾನಿಯಾಗಿರುವ 19.65 ಲಕ್ಷ ಕುಟುಂಬಗಳಿವೆ. ಪಿತೃಪ್ರಧಾನ ವ್ಯವಸ್ಥೆಯ ಬಿಗಿ ಹಿಡಿತದಿಂದ ಸಮಾಜ ಹೊರಬರುತ್ತಿರುವ ಬದಲಾವಣೆಗಳನ್ನು ಈ ಅಂಕಿ ಅಂಶಗಳು ಸಂಕೇತಿಸುತ್ತವೆಯೆ? ಹೌದು. ಒಂದರ್ಥದಲ್ಲಿ ಈ ಅಂಕಿ ಅಂಶಗಳು ಸಮಾಜದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಧ್ವನಿಸುತ್ತಿವೆ. ಆದರೆ ಈ ಬದಲಾವಣೆಗಳ ಹಿಂದಿರುವ ಒತ್ತಡಗಳು, ಸಾಮಾಜಿಕ ಸಮಸ್ಯೆಗಳ ಮತ್ತೊಂದು ಮುಖವನ್ನು ಅನಾವರಣಗೊಳಿಸುತ್ತಿವೆ ಎಂಬ ಕಟು ವಾಸ್ತವವನ್ನು ಅರಿಯುವುದು ಮುಖ್ಯ. ವಿಚ್ಛೇದನ, ಪತಿಯ ಸಾವು, ವಲಸೆ ಹೋದ ಪತಿ ಅಥವಾ ಮನೆ ಜವಾಬ್ದಾರಿ ಹೊರದಿರುವ ಹೊಣೆಗೇಡಿ ಗಂಡಂದಿರಿಂದಾಗಿ ಹೆಚ್ಚಿನ ಸಂದರ್ಭಗಳಲ್ಲಿ ಕುಟುಂಬದ ನೊಗವನ್ನು ಏಕಾಂಗಿಯಾಗಿ ಹೊರುವುದು ಮಹಿಳೆಗೆ ಅನಿವಾರ್ಯವಾಗುತ್ತಿದೆ. ಇದರಿಂದಾಗಿ ಮಹಿಳೆಯರ ಸಂಕಷ್ಟಗಳು ಮತ್ತಷ್ಟು ಹೆಚ್ಚುತ್ತಿರುವುದು ವಿಪರ್ಯಾಸ.

ಕುಟುಂಬದ ನೊಗ ಹೊತ್ತ ಮಹಿಳೆ ಸಾಮಾನ್ಯವಾಗಿ ಮೂರು ಬಗೆಯ ಅನನುಕೂಲಗಳನ್ನು ಎದುರಿಸಬೇಕಾಗುತ್ತದೆ. ಮೊದಲನೆಯದಾಗಿ ಬಡತನದ ಹೊರೆ. ಎರಡನೆಯದು ಲಿಂಗ ತಾರತಮ್ಯ. ಮೂರನೆಯದು ಬೆಂಬಲ ವ್ಯವಸ್ಥೆಯ ಕೊರತೆ. ಮಹಿಳೆ ಕುಟುಂಬದ ನೊಗ ಹೊತ್ತಿದ್ದಾಳೆ ಎಂದ ಮಾತ್ರಕ್ಕೆ ಆಕೆ ಆಸ್ತಿಯ ಯಜಮಾನಿಕೆ ಪಡೆದಿದ್ದಾಳೆ ಎಂದೇನೂ ಆಗಬೇಕಿಲ್ಲ. ರಾಜ್ಯದಲ್ಲಿ ಮಹಿಳೆ ಮುಖ್ಯಸ್ಥಳಾಗಿರುವ ಶೇಕಡ 25ರಷ್ಟು ಕುಟುಂಬಗಳಲ್ಲಿ ರೇಡಿಯೊ, ಟೆಲಿವಿಷನ್, ಕಂಪ್ಯೂಟರ್‌ಗಳು, ಫೋನ್ ಅಥವಾ ವಾಹನಗಳಿಲ್ಲ ಎಂಬುದನ್ನು ಜನಗಣತಿ ಅಂಕಿ ಅಂಶಗಳು ಹೇಳಿವೆ! ರಾಜ್ಯದಲ್ಲಿರುವ ಎಲ್ಲಾ ಮನೆಗಳ ಪೈಕಿ ಶೇಕಡ 60ರಷ್ಟು ಮನೆಗಳಲ್ಲಿ ಟೆಲಿವಿಷನ್‌ಗಳಿವೆ. ಆದರೆ ಟೆಲಿವಿಷನ್ ಹೊಂದಿರುವಂತಹ ಮಹಿಳೆ ಯಜಮಾನಿಯಾಗಿರುವ ಮನೆಗಳ ಪ್ರಮಾಣ ಶೇಕಡ 49. ರಾಜ್ಯದಲ್ಲಿರುವ ಶೇ.56.5ರಷ್ಟು ಎಲ್ಲಾ ಮನೆಗಳಲ್ಲಿ ಸೆಲ್‌ಫೋನ್‌ಗಳಿವೆ. ಆದರೆ ಮಹಿಳೆ ಯಜಮಾನಿಯಾಗಿರುವ ಮನೆಗಳಲ್ಲಿ ಸೆಲ್‌ಫೋನ್‌ಗಳಿರುವ ಪ್ರಮಾಣ ಶೇ. 47.68. ಹಾಗೆಯೇ ಶೇಕಡಾ 25.6 ರಷ್ಟು ಎಲ್ಲಾ ಮನೆಗಳಲ್ಲಿ ಸ್ಕೂಟರ್ ಅಥವಾ ಮೋಟಾರ್ ಸೈಕಲ್‌ಗಳಿವೆ. ಆದರೆ ಮಹಿಳೆ ಯಜಮಾನಿಯಾಗಿರುವ ಮನೆಗಳಲ್ಲಿ ವಾಹನಗಳಿರುವ ಪ್ರಮಾಣ ಕೇವಲ ಶೇಕಡ 14.09.

ಇಷ್ಟೊಂದು ಪ್ರಮಾಣದ ಆರ್ಥಿಕ ಅಂತರ ಏನನ್ನು ಧ್ವನಿಸುತ್ತದೆ? ಗಂಭೀರವಾದ ಸಮಾಜಶಾಸ್ತ್ರೀಯ ಅಧ್ಯಯನಕ್ಕೆ ಒಳಪಡಬೇಕಾದ ವಿಚಾರ ಇದು. ಪುರುಷರಿಗೆ ಹೋಲಿಸಿದಲ್ಲಿ ಮಹಿಳೆಯ ಆಯುಷ್ಯ ಪ್ರಮಾಣ ಹೆಚ್ಚು. ಹೀಗಾಗಿ ವಿಧವೆಯರ ಸಂಖ್ಯೆಯಲ್ಲಿ ಸಹಜವಾಗಿಯೇ ಹೆಚ್ಚಳವಾಗುತ್ತದೆ. ಇದೂ ಸಹ ಮಹಿಳೆ ಯಜಮಾನಿಯಾಗಿರುವ ಕುಟುಂಬಗಳ ಸಂಖ್ಯೆಯ ಹೆಚ್ಚಳಕ್ಕೆ ಕೊಡುಗೆ ನೀಡುತ್ತದೆ. ಆದರೆ ಪಿತೃಪ್ರಧಾನ ಮೌಲ್ಯಗಳು ಮಡುಗಟ್ಟಿರುವ ಸಾಮಾಜಿಕ ವ್ಯವಸ್ಥೆಯಲ್ಲಿ, ಇಂತಹ ಕುಟುಂಬಗಳಲ್ಲಿ ಮಹಿಳೆ ಯಜಮಾನಿಯಾದರೂ ಅದು ಆಕೆಯ ಸಬಲತೆಗೇನೂ ಸಂಕೇತವಾಗುವುದಿಲ್ಲ. ಬದುಕಿನ ಹೋರಾಟದ ಸಂಕಷ್ಟ ಮತ್ತಷ್ಟು ಹೆಚ್ಚಾಗುತ್ತದೆ ಅಷ್ಟೆ. ಯಾವುದೇ ಬೆಂಬಲ ವ್ಯವಸ್ಥೆಗಳಿಲ್ಲದಂತಹ ಪಿತೃಪ್ರಧಾನ ಮೌಲ್ಯಗಳು ರಾರಾಜಿಸುವಂತಹ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆ ಅನುಭವಿಸುವ ಬಡತನದ ಬೇಗೆ ಮತ್ತಷ್ಟು ಕ್ರೂರವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ವಿಧವೆಯರು ಹಾಗೂ ಏಕಾಂಗಿ ಮಹಿಳೆಯರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿ ಸುಧಾರಣೆಯ ವಿಚಾರ ಯೋಜನಾ ನೀತಿಗಳಲ್ಲಿ ಆದ್ಯತೆ ಪಡೆಯಬೇಕಿರುವುದು ಅವಶ್ಯ.

ರಾಷ್ಟ್ರದಲ್ಲಿ 49 ಲಕ್ಷ ಏಕ ಸದಸ್ಯ ಮಹಿಳೆಯರ ಮನೆಗಳಿದ್ದು, ಇವುಗಳಲ್ಲಿ ಮುಕ್ಕಾಲು ಭಾಗ ಗ್ರಾಮೀಣ ಪ್ರದೇಶಗಳಲ್ಲಿವೆ ಎಂಬುದು ಜನಗಣತಿಯಲ್ಲಿ ಬಯಲಾಗಿದೆ. ಈ ವಿವರಗಳು ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಆಗುತ್ತಿರುವ ಪಲ್ಲಟಗಳತ್ತ ಬೆಳಕು ಚೆಲ್ಲಿವೆ. ಈ ಅಂಕಿ ಅಂಶಗಳು ಯೋಜನೆಗಳ ದಿಕ್ಕು ದೆಸೆಗಳನ್ನು ನಿರ್ಧರಿಸುವಲ್ಲಿ ಯೋಜನಾ ಆಯೋಗಕ್ಕೆ ಸಹಾಯಕವಾಗಬೇಕು.

■ ಸಿ.ಜಿ. ಮಂಜುಳಾ



ವಿಷ್ಣು